# ಕಮ್‌ಬ್ಯಾಕ್ ವಿಶೇಷ ಎನಿಸಬೇಕು: ನಭಾ



‘ವಜ್ರಕಾಯ’ ಸಿನಿಮಾ ನಂತರ ಕನ್ನಡ ಪ್ರೇಕ್ಷಕರಲ್ಲಿ ‘ಪಟಾಕಾ’ ಎಂದೇ ಹೆಸರಾದವರು ನಟಿ ನಭಾ ನಟೇಶ್. ಮೊದಲ ಬಾರಿ ನಟ ಶಿವರಾಜ್‌ಕುಮಾರ್ ಅವರೊಂದಿಗೆ ತೆರೆಹಂಚಿಕೊಂಡಿದ್ದ ಅವರು ಬಹುಬೇಗ ಸಿನಿಮಾರಂಗದಲ್ಲಿ ತಮ್ಮದೊಂದು ಗುರುತನ್ನೂ ಮೂಡಿಸಿದ್ದರು. ‘ವಜ್ರಕಾಯ’ ನಂತರ ನಭಾ ಕರಿಯರ್ ಏರುಗತಿಯಲ್ಲಿ ಸಾಗಿ ತೆಲುಗು ಸಿನಿಮಾದತ್ತಲೂ ರೆಕ್ಕೆ ವಿಸ್ತರಿಸಿದರು. ಸಾಕಷ್ಟು ಸಿನಿಮಾಗಳಲ್ಲಿ ಕಾಣಿಸಿಕೊಂಡರು. ಈ ಎಲ್ಲದರ ನಡುವೆ ಕನ್ನಡದೊಂದಿಗಿನ ತಮ್ಮ ನಂಟು ಎಂದೂ ಮಸುಕಾಗುವುದಿಲ್ಲ ಎಂದು ಹೇಳಿಕೊಂಡಿದ್ದಾರೆ ನಭಾ.

ಸದ್ಯ ‘ಸ್ವಯಂಭು’ ಹಾಗೂ ‘ನಾಗಬಂಧನಂ’ ಸಿನಿಮಾಗಳಲ್ಲಿ ನಟಿಸಿರುವ ಅವರು, ಈ ಸಿನಿಮಾಗಳಲ್ಲಿ ಕನ್ನಡದಲ್ಲಿ ತಾವೇ ಡಬ್ ಮಾಡುವುದಾಗಿ ತಿಳಿಸಿದ್ದಾರೆ. ಡಬ್ ಮಾಡುವ ಮೂಲಕ ಕನ್ನಡ ಪ್ರೇಕ್ಷಕರಿಗೆ ರೀಕನೆಕ್ಟ್ ಆಗುವ ಆಲೋಚನೆಯಲ್ಲಿದ್ದಾರೆ. ದೊಡ್ಡ ಮಟ್ಟದಲ್ಲಿ ಈ ಎರಡೂ ಸಿನಿಮಾಗಳು ನಡೆಯುತ್ತಿದ್ದು, ನೂರು ಕೋಟಿ ರೂಪಾಯಿಗೂ ಹೆಚ್ಚು ಬಜೆಟ್‌ನಲ್ಲಿ ಮೂಡಿಬರುತ್ತಿದೆ. ಬಹುಭಾಷೆಗಳಲ್ಲಿ ಬಿಡುಗಡೆ ಮಾಡುತ್ತಿದ್ದು, ಕನ್ನಡಕ್ಕೂ ಡಬ್ ಆಗಲಿದೆ.

‘ನನ್ನ ಹೃದಯ ಎಲ್ಲಿದೆಯೋ ಅಲ್ಲಿಗೇ ಮರಳಬೇಕು. ‘ಸ್ವಯಂಭು’ ಹಾಗೂ ‘ನಾಗಬಂಧನಂ’ ಸಿನಿಮಾದಲ್ಲಿ ಕನ್ನಡದಲ್ಲಿ ನಾನೇ ಡಬ್ ಮಾಡುತ್ತೇನೆ ಎಂದು ಸಿನಿಮಾ ತಂಡಗಳಿಗೆ ಹೇಳಿದ್ದೇನೆ. ನನ್ನ ಆರಂಭದ ಹಾದಿಯನ್ನು ನೆನಪಿಸಿಕೊಳ್ಳುವ ನೆಪವೂ ಇದಾಗಿದೆ’ ಎಂದು ಹೇಳಿಕೊಂಡಿದ್ದಾರೆ ನಭಾ.

‘ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ತೊಡಗಿಕೊಳ್ಳುವುದರಿಂದ ಚಿಕ್ಕ ಪ್ರಾಜೆಕ್ಟ್‌ಗಳಲ್ಲಿ ಮಾಡಲು ನಾನು ಹಿಂಜರಿಯಬಹುದು ಎಂದು ಕೆಲವರು ತಿಳಿದುಕೊಳ್ಳುತ್ತಾರೆ. ಆದರೆ ನಾನು ಸಿನಿಮಾವನ್ನು ಹಾಗೆ ನೋಡುವುದಿಲ್ಲ. ‘ವಜ್ರಕಾಯ’ ಅಥವಾ ‘ಇಸ್ಮಾರ್ಟ್ ಶಂಕರ್’ನಲ್ಲಿಯೂ ನನ್ನ ಸ್ಕ್ರೀನ್ ಟೈಂ ಕಡಿಮೆಯಿತ್ತು. ಆದರೆ ಪಾತ್ರ ಪರಿಣಾಮಕಾರಿಯಾಗಿತ್ತು. ಬಜೆಟ್‌ಗಿಂತ ಪಾತ್ರದ ಗಟ್ಟಿತನ ಮುಖ್ಯವಾಗುತ್ತದೆ’ ಎಂದು ವಿವರಿಸಿದ್ದಾರೆ.

‘ಕನ್ನಡದಲ್ಲಿ ಅವಕಾಶಗಳು ಕಡಿಮೆ ಆಗಿವೆ. ನಾನು ಕನ್ನಡದತ್ತ ಬರುತ್ತಿಲ್ಲ ಎಂದು ಕೆಲವರು ತಿಳಿದುಕೊಳ್ಳುತ್ತಾರೆ. ಅದು ನಿಜವಲ್ಲ. ಕನ್ನಡ ಸಿನಿಮಾಗಳನ್ನು ನೋಡುತ್ತಾ ಬೆಳೆದವಳು ನಾನು. ನಾನು ಕನ್ನಡತಿ. ಇಲ್ಲಿಂದಲೇ ನನ್ನ ಪಯಣ ಆರಂಭವಾಗಿದ್ದು. ಆದರೆ ಮತ್ತೆ ಕನ್ನಡ ಸಿನಿಮಾಗೆ ಕಮ್‌ಬ್ಯಾಕ್ ಮಾಡಬೇಕೆಂದರೆ, ಅದು ವಿಶೇಷವಾಗಿಯೇ ಇರಬೇಕೆಂದು ಬಯಸುತ್ತೇನೆ’ ಎಂದು ತಮ್ಮ ಮನದಾಸೆಯನ್ನು ತೆರೆದಿಟ್ಟಿದ್ದಾರೆ. ■



## ಕನ್ನಡಕ್ಕೆ ಆಯೆಷಾ ಜೀನತ್

‘ದಿಯಾ’ ನಂತರ ನಟರಾದ ಪೃಥ್ವಿ ಅಂಬರ್ ಹಾಗೂ ದೀಕ್ಷಿತ್ ಶೆಟ್ಟಿ ಮತ್ತೊಂದು ಸಿನಿಮಾದಲ್ಲಿ ಒಂದಾಗುತ್ತಿದ್ದಾರೆ. ‘ಕಾಮಿಡಿ ಕಿಲಾಡಿ’ಯ ದೀಪಿಕಾ ಕೂಡ ಜೊತೆಯಾಗಿದ್ದು, ನಟಿ ಆಯೆಷಾ ಜೀನತ್ ಈ ಸಿನಿಮಾ ಮೂಲಕ ಕನ್ನಡಕ್ಕೆ ಎಂಟ್ರಿ ಕೊಟ್ಟಿದ್ದಾರೆ.

ಕಾಸರಗೋಡು ಮೂಲದ ಆಯೆಷಾ, ಮೊದಲು ತಮಿಳು ಕಿರುತೆರೆಯಲ್ಲಿ ಕಾಣಿಸಿಕೊಂಡರು. ನಂತರ ‘ಬಿಗ್‌ಬಾಸ್ ಸೀಸನ್ 6’ರಲ್ಲಿ ಭಾಗವಹಿಸಿದ್ದರು. ‘ಬಿಗ್‌ಬಾಸ್’ ನಂತರ ಅವರ ಜನಪ್ರಿಯತೆ ಹೆಚ್ಚಿತು. ಕಿರುತೆರೆ, ಸಿನಿಮಾ ಹಾಗೂ ಡಿಜಿಟಲ್ ವೇದಿಕೆಗಳಲ್ಲಿ ಅವರಿಗೆ ಹೆಚ್ಚೆಚ್ಚು ಅವಕಾಶಗಳು ಸಿಗಲು ಆರಂಭಿಸಿದವು. ತಮಿಳಿನಲ್ಲಿ ‘ರ್‍ಯಾಂಬೊ’, ಮಲಯಾಳಂನಲ್ಲಿ ‘ಡಾ. ಬೆನೆಟ್’ನಲ್ಲಿ ನಟಿಸಿರುವ ಅವರೀಗ ಕನ್ನಡ ಭಾಷೆಗೆ ಪದಾರ್ಪಣೆ ಮಾಡಿದ್ದಾರೆ. ದೀಕ್ಷಿತ್ ಶೆಟ್ಟಿಗೆ ಜೋಡಿಯಾಗಿ ಬಣ್ಣ ಹಚ್ಚುತ್ತಿದ್ದಾರೆ. ಮನುಷ್ಯರ ಭಾವನೆಗಳನ್ನೇ ಮೂಲವಾಗಿಟ್ಟುಕೊಂಡು ಸಿನಿಮಾ ಹೆಣೆಯುವುದರಲ್ಲಿ ನಿಸ್ಸೀಮರಾಗಿರುವ ಕೆ.ಎಸ್. ಅಶೋಕ್, ಈ ಸಿನಿಮಾ ನಿರ್ದೇಶನ ಮಾಡುತ್ತಿದ್ದಾರೆ. ಶ್ರೀಧರ್ ಎಚ್. ಕೃಷ್ಣ ಅವರು ಪ್ರಮುಖ ಪಾತ್ರದಲ್ಲಿರಲಿದ್ದಾರೆ. ■